ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 31/10/20

### ಸರಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಶೇ.7.5 ಮೀಸಲಿಗೆ ಅಂಕಿತ

# ನೀಟ್‌ಗೆ ತಮಿಳುನಾಡು ಮಾದರಿ

**ಹೊಸದಿಲ್ಲಿ:** ನೀಟ್ ಪರೀಕ್ಷೆಯನ್ನು ಪಾಸು ಮಾಡಿದ ಸರಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಪ್ರವೇಶದಲ್ಲಿ ಶೇ.7.5ರಷ್ಟು ಮೀಸಲು ನೀಡುವ ತಮಿಳು ನಾಡು ಸರಕಾರದ ನಿರ್ಧಾರಕ್ಕೆ ಕೊನೆಗೂ ರಾಜ್ಯಪಾಲರ ಒಪ್ಪಿಗೆ ದೊರೆತಿದೆ. ತಮಿಳುನಾಡು ವಿಧಾನಸಭೆ 'ನೀಟ್ ಮೀಸಲು ವಿಧೇಯಕ' ಅಂಗೀಕರಿಸಿದ 45 ದಿನ್ನಗಳ ಬಳಿಕ ಅದಕ್ಕೆ ರಾಜ್ಯಪಾಲರಾದ ಬನ್ವರಿಲಾಲ್ ಪುರೋಹಿತ್ ಅವರ ಅಂಕಿತ ಬಿದ್ದಿದೆ. ಇದರೊಂದಿಗೆ ವಿಧೇಯಕ ಕಾಯಿದೆಯಾಗಿ ಜಾರಿಗೆ ಬಂದಿದೆ.

ಇನ್ನುಮುಂದೆ ಸರಕಾರಿ ಮತ್ತು ಖಾಸಗಿ ವೈದ್ಯಕೀಯ, ದಂತ ವೈದ್ಯಕೀಯ ಕಾಲೇಜುಗಳಲ್ಲಿ 300 ಎಂಬಿಬಿಎಸ್ ಸೀಟುಗಳು ಸರಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಮೀಸಲು ಇರಲಿವೆ. 6 ರಿಂದ 12ನೇ ತರಗತಿವರೆಗೂ ಸರಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೂ ಲಾಭ ಸಿಗಲಿದೆ.

ಸರಕಾರಿ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವೈದ್ಯಕೀಯ, ದಂತ ವೈದ್ಯಕೀಯ, ಹೋಮಿಯೋಪಥಿ, ಯುನಾನಿ, ಆಯುರ್ವೇದ, ಸಿದ್ಧ ಆರೋಗ್ಯ ಪದ್ಧತಿಗ ಕೋರ್ಸ್‌ಗಳ ಪ್ರವೇಶಕ್ಕೂ ಇದು ಅನ್ವಯವಾಗಲಿದೆ ಎಂದು ಸರಕಾರ ಆದೇಶದಲ್ಲಿ ತಿಳಿಸಿದೆ. ರಾಜ್ಯದ ಒಟ್ಟಾರೆ ಮೀಸಲು ಕೋಟಾ ಶೇ.69ರ ವ್ಯಾಪ್ತಿಯಲ್ಲಿಯೇ ಈ ಮೀಸಲು ವ್ಯವಸ್ಥೆ ಮುಂದುವರಿಯಲಿದೆ. ಇಂತಹದ್ದೊಂದು ವ್ಯವಸ್ಥೆಯನ್ನು ಜಾರಿಗೆ ತಂದ ಮೊದಲ ರಾಜ್ಯ ತಮಿಳುನಾಡು ಎಂದು ಹೇಳಲಾಗುತ್ತಿದೆ.

ನ್ಯಾಯಮೂರ್ತಿ ಕೆ. ಕಲೈರಸನ್ ಆಯೋಗದ ಶಿಫಾರಸುಗಳ ಮೇರೆಗೆ ರಾಜ್ಯ ಸರಕಾರ ಈ ಮೀಸಲು ವ್ಯವಸ್ಥೆ ಕೈಗೊಂಡಿದ್ದು, ಇದರಿಂದ ನಿಜವಾಗಿಯೂ ಸರಕಾರಿ ಶಾಲೆಗಳಲ್ಲಿ ಓದಿದ ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳಿಗೆ ವೈದ್ಯಕೀಯ ಶಿಕ್ಷಣದಲ್ಲಿ ನ್ಯಾಯ ಕಲ್ಪಿಸಿದಂತಾಗಿದೆ ಎಂದು ತಮಿಳು ನಾಡು ಸರಕಾರ ಹೇಳಿಕೊಂಡಿದೆ.

ರಾಜ್ಯ ವಿಧಾನಸಭೆಯು ಸೆ.15ರಂದೇ ಈ ವಿಧೇಯಕ ಅಂಗೀಕರಿಸಿದೆ. ಆದರೆ ರಾಜ್ಯಪಾಲರು ಅಂಕಿತ ಹಾಕಿರಲಿಲ್ಲ. ''ರಾಜ್ಯಪಾಲರು ಉದ್ದೇಶಪೂರ್ವಕ ವಿಳಂಬ ಮಾಡುತ್ತಿದ್ದಾರೆ,'' ಎಂದು ಆರೋಪಿಸಿ ಪ್ರತಿಪಕ್ಷ ಡಿಎಂಕೆ ಧರಣಿ ನಡೆಸಿತ್ತು. ನಂತರ ಆಡಳಿತಾರೂಢ ಎಐಎಡಿಎಂಕೆ ಸಹ ರಾಜಭವನದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತ್ತು. ಅಲ್ಲದೇ, ಗುರುವಾರವಷ್ಟೇ ಮೀಸಲು ಸಂಬಂಧವಾಗಿ ಸರಕಾರ ಆದೇಶವನ್ನೂ ಹೊರಡಿಸಿತ್ತು. ಇದರ ಬೆನ್ನಲ್ಲೇ ವಿಧೇಯಕಕ್ಕೆ ರಾಜ್ಯಪಾಲರ ಒಪ್ಪಿಗೆ ಬಿದ್ದಿದೆ.



## ರಾಜಭವನ ಸ್ಪಷ್ಟನೆ ಏನು?

ವಿಧೇಯಕದ ಕುರಿತು ರಾಜ್ಯಪಾಲರು ಸಾಲಿಸಿಟರ್ ಜನರಲ್ ಆಫ್ ಇಂಡಿಯಾ ಅವರಿಂದ ಕೆಲವು ಸ್ಪಷ್ಟನೆ ಬಯಸಿದ್ದರು. ಸೆ.26ರಂದೇ ಬರೆದ ಪತ್ರಕ್ಕೆ ಸಾಲಿಸಿಟರ್ ಜನರಲ್ ಅವರು ಅ.29ರಂದು ಸ್ಪಷ್ಟನೆಗಳೊಂದಿಗೆ ಉತ್ತರ ನೀಡಿದ್ದಾರೆ. ತಕ್ಷಣವೇ ರಾಜ್ಯಪಾಲರು ವಿಧೇಯಕಕ್ಕೆ ಅಂಕಿತ ಹಾಕಿದ್ದಾರೆ ಎಂದು ತಮಿಳುನಾಡು ರಾಜಭವನ ತಿಳಿಸಿದೆ.

## ಯಾವ ವರ್ಷದಿಂದ ಜಾರಿ?

ವೈದ್ಯ ಶಿಕ್ಷಣದಲ್ಲಿನ ಮೀಸಲು 2020-21ರ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರಲಿದೆ ಎಂದು ತಮಿಳುನಾಡು ಸರಕಾರ ತಿಳಿಸಿದೆ.

## ಆರ್‌ಟಿಇ ವಿದ್ಯಾರ್ಥಿಗಳಿಗೂ ಮೀಸಲು

ಆರ್‌ಟಿಇ ಕಾಯಿದೆಯಡಿ ಖಾಸಗಿ ಶಾಲೆಗಳಲ್ಲಿ 8ನೇ ತರಗತಿವರೆಗೂ ಉಚಿತ ಶಿಕ್ಷಣ ಪಡೆದು ಬಳಿಕ, 9ನೇ ತರಗತಿಯಿಂದ ಸರಕಾರಿ ಶಾಲೆಗೆ ಶಿಫ್ಟ್ ಆದ ಮಕ್ಕಳಿಗೂ ಈ ಮೀಸಲು ವ್ಯವಸ್ಥೆಯಡಿ ಲಾಭ ಸಿಗಲಿದೆ ಎಂದು ಸ್ಪಷ್ಟಪಡಿಸಲಾಗಿದೆ. ಅಖಿಲ ಭಾರತ ಕೋಟಾದಡಿ ನೀಟ್ ಪರೀಕ್ಷೆಯಿಂದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ ಎಂಬ ವಿಷಯವನ್ನಿಟ್ಟುಕೊಂಡು ತಮಿಳುನಾಡಿನಲ್ಲಿ ಅನೇಕ ರಾಜಕೀಯ ಪಕ್ಷಗಳು ಕಾನೂನು ಹೋರಾಟ ನಡೆಸಿದ್ದನ್ನೂ ಇಲ್ಲಿ ಸ್ಮರಿಸಬಹುದಾಗಿದೆ.